ಬೇಕೆಂದು ನಾನು ಹೇಳುತ್ತೇನೆ. ೧೯೮೪ನೇ ಇಸವಿಯಲ್ಲಿ ಏನು ನೀವು ತೀರ್ಮಾನವನ್ನು ತೆಗೆದುಕೊಂಡಿರುತ್ತೀರಿ ಅದನ್ನು ಬದಲಾವಣೆ ಮಾಡುವುದು ಸೂಕ್ತವೆಂದು ನಾನು ಹೇಳುತ್ತೇನೆ.

ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ಇದು ರಾಜ್ಯದ ವಿಚಾರಕ್ಕೆ ಸಂಬಂಧಪಟ್ಟಿದ್ದು. ತಾವು ಇದರ ಬಗ್ಗೆ ಮಾತನಾಡಿದ್ದೀರಿ. ಶ್ರೀಮತಿ ಇಂದಿರಾಗಾಂಧಿ ಯವರನ್ನು ವಿರೋಧಿಸಿ ಮಾತನಾಡಿದ್ದೀರಿ. ಮತ್ತೆ ನಾನು ಈಗ ಅವರ ಪರವಾಗಿ ಇದ್ದೇನೆ ಎನ್ನುವ ಅರ್ಥದಲ್ಲಿಯೂ ಕೂಡ ಮಾತನಾಡಿದ್ದೀರಿ. ನಾವು ನೀವು ಸೇರಿ ಚುನಾವಣೆ ಪ್ರಚಾರಕ್ಕೆ ಹೋದಾಗ ಮತದಾರರು ಬಹುಮತ ಕೊಟ್ಟು ಪ್ರೋತ್ಸಾಹಿಸಿದರು. ಬಹಳ ಸಂತೋಷ, ೧೯೮೪ನೇ ಡಿಸೆಂಬರ್‌ನಲ್ಲಿ ಲೋಕಸಭೆ ಚುನಾವಣೆಯ ಸಂದರ್ಭದಲ್ಲಿ 'ಚೈತನ್ಯ ರಥ' ಎಂದು ಈಗ ಏನು ಹೆಸರನ್ನು ಇಟ್ಟುಕೊಂಡಿರುತ್ತೀರಿ, ಆಗ ಅದಕ್ಕೆ ಜಯವಾಹಿನಿ ಎಂದು ಹೆಸರಿಟ್ಟುಕೊಂಡು ತಾವು ಪ್ರವಾಸ ಮಾಡಿದಿರಿ. ಆಗ ಏತಕ್ಕೆ ನಿಮಗೆ ಬೆಂಬಲ ಸಿಗಲಿಲ್ಲ ವೆಂದು ಕೇಳುತ್ತೇನೆ. ಈಗ ನಮಗೆ ಮತ ಸಿಗಲಿಲ್ಲ ಎನ್ನುವ ಪ್ರಶ್ನೆಯಲ್ಲ. ಬಹುಮತ ಪಡೆದಿರಬಹುದು, ಐದು ವರ್ಷ ಇರಬಹುದು ಅದಕ್ಕೆ ನಾವು ತಲೆಬಾಗುತ್ತೇವೆ. ಜನರ ತೀರ್ಪನ್ನು ನಾವು ಒಪ್ಪಿಕೊಂಡಿದ್ದೇವೆ. ಆದರೆ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ತಾವು ಪಾಪಿರತಕ್ಕಂಥ ಪದಪ್ರಯೋಗಕ್ಕೆ ನನಗೆ ಬಹಳ ಬೇದವಾಗುತ್ತದೆ. ಆಗ ಅವರ ಮೇಲೆ ಕಕ್ಕಿದ್ದನ್ನು ಈಗ ನೆಕ್ಕುತ್ತಿದ್ದೀರಿ ಎನ್ನತಕ್ಕಂಥ ಪದ ಪ್ರಯೋಗ ಮಾಡಿದ್ದೀರಿ. ನಾನು ಇಂದೂ ಕೂಡ ಹೇಳುತ್ತೇನೆ. ಇಂಥ ಪದಪ್ರಯೋಗ ಈ ಸದನದೊಳಗೆ ಮಾಡತಕ್ಕಂಥದ್ದು ಒಳ್ಳೆಯದಲ್ಲ. ಮಾನ್ಯಮುಖ್ಯಮಂತ್ರಿಗಳಾಗಿ, ಸಭಾನಾಯಕರಾಗಿ ಈ ಈ ರೀತಿ ಮಾತನಾಡತಕ್ಕಂಥದ್ದು ಒಳ್ಳೆಯದಲ್ಲ. ಕರ್ನಾಟಕ ರಾಜ್ಯ ಈ ರೀತಿಯಾಗಿ ಪದ ಪ್ರಯೋಗ ಮಾಡತಕ್ಕಂಥ ಮುಖ್ಯ ಮಂತ್ರಿಯನ್ನು ಪಡೆದಿರತಕ್ಕಂಥದ್ದು ಜನತೆಯ ದೌರ್ಭಾಗ್ಯವಾಗಿದೆ. ಆದರಲ್ಲೂ ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ಮಾತನಾಡಿದರೆ ಅದರ ಜವಾಬ್ದಾರಿಯನ್ನು ನೀವು ಹೊತ್ತುಕೊಳ್ಳಬೇಕಾಗುತ್ತದೆ. ಅವರು ೧೯೭೭ರಲ್ಲಿ ಪ್ರಧಾನ ಮಂತ್ರಿಯಾಗಿದ್ದಾಗ ಕರ್ನಾಟಕ ರಾಜ್ಯದಲ್ಲಿ ಮಾನ್ಯ ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿ ತಾವು ಹಣಕಾಸಿನ ಮಂತ್ರಿಗಳಾಗಿ ಶ್ರೀಮತಿ ಇಂದಿರಾಗಾಂಧಿಯವರನ್ನು ಹಾಡಿ ಹೊಗಳಿದರು. ಈಗ ಅವರ ವಿರೋಧಪಕ್ಷದ ಮಂತ್ರಿ ಮಂಡಲದಲ್ಲಿ ಇದ್ದುಕೊಂಡು ಏನು ಕಕ್ಕುತ್ತಿದ್ದೀರಿ ಅದನ್ನು ನಿಮ್ಮ ಉದ್ದಿಷ್ಟ ನಾಲಿಗೆಯನ್ನು ಚಾಚಿ ನೆಕ್ಕಿ ಎಂದು ನಾನು ಹೇಳುತ್ತೇನೆ.

೧೨-೦೦ ಪಿ. ಎಂ.

ಅಧ್ಯಕ್ಷರು.—ಪರ್ಯಾಲೋಚನಾ ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾಪ ಏನೆಂದರೆ—"ಮಾರ್ಚ್ ೧೫,೧೯೮೫ ರಂದು ವಿಧಾನ ಮಂಡಲದ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೊರುತ್ತೇವೆ" ಎಂದು ಶ್ರೀ ವೇದಾಂತ ಹೆಮ್ಮಿಗೆಯಪರು ದಿನಾಂಕ ೧೯ನೇ ಏಪ್ರಿಲ್ ೧೯೮೫ ರಂದು ಸೂಚಿದ ಪ್ರಸ್ತಾವದ ಮೇಲಿನ ಚರ್ಚೆಗೆ ಮುಖ್ಯ ಮಂತ್ರಿಯವರಿಂದ ಉತ್ತರ. ಇದನ್ನು ಅಂಗೀಕರಿಸುವುದು.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು.

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

ಅಧ್ಯಕ್ಷರು.—ಇನ್ನು ಸಭೆಯಲ್ಲಿ ಮಂಡಿಸಲಾಗುವ ಕಾಗದಪತ್ರಗಳು

ಶ್ರೀ ಬಿ. ರಾಚಯ್ಯ (ಒಳಾಡಳಿತ ಮಂತ್ರಿ).—೧೯೫೩ನೇ ಇಸವಿಯ ವಿಚಾರಣಾ ಆಯೋಗ ಶಾಸನದ ೩ (೪) ನೇ ಕಲಮಿನ ಮೇರೆಗೆ ಮಾಲೂರಿನಲ್ಲಿ ನಡೆದ ಗೋಲೀಬಾರ್ ಬಗ್ಗೆ ನೇಮಿಸಲಾದ ವಿಚಾರಣಾ ಆಯೋಗದ ವರದಿಯೊಂದಿಗೆ ಆ ಬಗ್ಗೆ ಕೈಕೊಂಡ ಕ್ರಮದ ಜ್ಞಾಪನಾ ಪತ್ರವನ್ನು ಸಭೆಯ ಮುಂದಿಡುತ್ತಿದ್ದೇನೆ,

ಶ್ರೀ ಜೆ. ಎಚ್. ಪಟೇಲ್ (ದೊಡ್ಡ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿ).—೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (೨) ಕಲಮಿನ ಮೇರೆಗೆ-೧೯೮೫-೮೬ನೇ ಸಾಲಿನ ಬೆಂಗಳೂರಿನ ಮೈಸೂರು ಲ್ಯಾಂಪ್ ವರ್ಕ್ಸ್ ಲಿಮಿಟೆಡ್, ರವರ ೪೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು —ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಮನವಿಯನ್ನೊಪ್ಪಿಸುವುದು

ಶ್ರೀ ಮಲ್ಲಾರಗೌಡ. ಎಸ್. ಪಾಟೀಲ್.—ಸ್ವಾಮಿ, ಈ ಕೆಳಕಂಡ ಮನವಗಳನ್ನು ಒಪ್ಪಿಸುತ್ತಿದ್ದೇನೆ.

ಅ) ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬೋರಗಳ್ಳಿ ಗ್ರಾಮದಲ್ಲಿ ಕೆರೆಯ ನಿರ್ಮಾಣ.

ಆ) ಬೆಳಗಾಂ ಜಿಲ್ಲೆಯ ಸಂಕೇಶ್ವರ ತಾಲ್ಲೂಕಿನ ಹಳ್ಳಿಗಳಲ್ಲಿ ಪ್ರೌಢಶಾಲೆ ಪ್ರಾರಂಭಿಸುವುದು ಹಾಗೂ ಕುಡಿಯುವ ನೀರನ್ನೊದಗಿಸುವುದು.

ಇ) ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹಂದಿ ಗೋಡು ಗ್ರಾಮದ ಉತ್ತರ ಕಲ್ಲಣ ಕೊಂಡಿಯಲ್ಲಿ ಕೆರೆ ನಿರ್ಮಾಣ,

ಈ) ಸಂಕೇಶ್ವರದ ಟೌನಿನಲ್ಲಿರುವ ರಾಣಿ ಚೆನ್ನಮ್ಮ ಆಸ್ಪತ್ರೆ ಮತ್ತು ಹೆರಿಗೆ ಆಸ್ಪತ್ರೆಗಳಿಗೆ ಇನ್ನೂ ಹೆಚ್ಚು ಹಾಸಿಗೆಗಳನ್ನೊದಗಿಸುವುದು.

ಅಧ್ಯಕ್ಷರು —ಮನವಿಗಳನ್ನು ಅರ್ಜಿಗಳ ಸಮಿತಿಗೆ ಒಪ್ಪಿಸಲಾಗಿದೆ. ಇನ್ನು, ಗಮನ ಸೆಳೆಯುವ ಸೂಚನೆಗಳು, ಬಂಗಾರಪ್ಪನವರೇ ನೀವು ಮಾತನಾಡಿ.

ಹಕ್ಕು ಭಾದ್ಯತಾ ಸೂಚನೆ

ವಿಷಯ —ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪ್ರಶ್ನೆ ತರಗತಿಗಳು ಬಹಿರಂಗವಾಗಿರುವುದು.

ಶ್ರೀ ಬಿ. ಎಸ್. ಎಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಒಂದು ಪ್ರಿವಿಲೆಜ್ ಮೋಷನ್ ನೋಟೀಸ್ ಕೊಟ್ಟಿದ್ದೇನೆ. ನನಗೆ ಮಾತನಾಡಲಿಕ್ಕೆ ತಾವು ದಯವಿಟ್ಟು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ೧೩ನೇ ವಯಮಾವಳಿ ಪ್ರಕಾರ ಈ ನಮ್ಮ ಹಕ್ಕುಚ್ಯುತಿಯಾಗಿದು ಆದನ್ನು ನಾನು ಮಾಡಿದ್ದೇನೆ.

ದಿನಾಂಕ ೪–೪–೮೫ ರಂದು ಎಸ್, ಎಸ್. ಎಲ್. ಸಿ. ಪರೀಕ್ಷೆಗೆ, ಲೆಕ್ಕದ ಕಪ್ರಶ್ನೆ ಪತ್ರಿಕೆಯನ್ನು ಕೊಡಬೇಕಾಗಿತ್ತು. ಆದರೆ ೩ನೇ ತಾರೀಖಿನ ದಿವಸವೇ ಆ ಪ್ರಶ್ನೆ ಪತ್ರಿಕೆ ನನಗೆ ಸಿಕ್ಕಿತ್ತು. ೪ನೇ ತಾರೀಖು ಬೆಳಿಗ್ಗೆ ಈ ಸದನ ಪ್ರಾರಂಭವಾದಾಗ ೯.೧೦ ಕ್ಕೆ ಪ್ರಶ್ನೆ ಪತ್ರಿಕೆಯನ್ನು ತಮ್ಮ ಮುಂದೆ ಇಟ್ಟಿದ್ದೆ. ಇದನ್ನು ಪರಿಶೀಲನೆ ಮಾಡಿ ಸನ್ಮಾನ್ಯ ಮಂತ್ರಿಗಳು "ಈ ಕೋಟಾ ಪತ್ರಿಕೆಯನ್ನು ಮಾನ್ಯ ಎಡಿಯೂರಪ್ಪನವರು ಏನು ಕೊಟ್ಟಿದ್ದಾರೆ. ಆದರಲ್ಲಿ ಒಂದೇ ಒಂದು ಪ್ರಶ್ನೆ ಮಾತ್ರ ಸ್ವಲ್ಪ ಹೋಲಿಕೆಯಾಗುವುದರಲ್ಲಿದೆ "ಎನ್ನುವ ಉತ್ತರವನ್ನು ಈ ಸದನಕ್ಕೆ ಕೊಟ್ಟಿದ್ದರು ಸ್ವಾಮಿ ೧.೪.೮೫ ರಂದು ಕನ್ನಡ ಪ್ರಶ್ನೆ ಪತ್ರಿಕೆ, ೨.೪.೮೫ ರಂದು ಇಂಗ್ಲೀಷ್ ಪತ್ರಿಕೆ ಸಹ ನನಗೆ ಮುಂಚಿತವಾಗಿ ಸಿಕ್ಕಿದ್ದವು. ೪ನೇ ತಾರೀಖು ಗಣಿತ ಪ್ರಶ್ನೆ ಪತ್ರಿಕೆಯದ್ದು ಸದನದ ಮುಂದಿಟ್ಟಾಗ ಅದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡದೆ ಒಂದೇ ಒಂದು ಪ್ರಶ್ನೆ ಮಾತ್ರ ಹೋಲಿಕೆ ಇದೆ. ಎನ್ನುವ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆ ಪತ್ರಿಕೆಯಲ್ಲಿ ೬೫ ನಂಡರುಂಗಳು ಇದ್ದವು ನಾನು ಕೊಟ್ಟಿದ್ದ ಪತ್ರಿಕೆಯಲ್ಲಿ ೩೫ ರಲ್ಲಿ ೩೦ ಅಂಕಗಳು ಪ್ರಶ್ನೆಗಳು ಸರಿಯಿದ್ದವು. ೫೫ ಅಂಕಗಳಿಗೆ ಸಂಬಂಧಪಟ್ಟ ಪ್ರಶ್ನೆಗಳು ಆದರಲ್ಲಿ ಇದ್ದವು. ಇಂತಹ ಪತ್ರಿಕೆ ಎರಡು ನಿಮಿಷ ಮುಂದೆ ಸಿಕ್ಕಿದರೂ ಸಾಕು, ನಗರಗಳಲ್ಲಿ ಇರತಕ್ಕಂಥ ವಿದ್ಯಾರ್ಥಿಗಳು ೬೫ ನಂಬರುಗಳಿಗೆ ೬೦ ನಂಬರಂಗಳನ್ನು ತೆಗೆಯತಕ್ಕಂಥ ಸಾಧ್ಯತೆ ಇರುತ್ತದೆ. ಆದರೆ ಇದರಿಂದ ಗ್ರಾಮಾಂತರ ಪ್ರದೇತಗಳಲ್ಲಿ ವಾಸವಾಗಿರತಕ್ಕಂಥ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ.....

ಅಧ್ಯಕ್ಷರು:—ತಾವು ಹೇಳಿದ್ದು ಗೊತ್ತಾಯಿತು. ಬೇಗ ಮುಂಗಿಸಿ ಬಿಡಿ.

ಶ್ರೀ ಬಿ, ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ನಾನು ಹೇಳುವುದು ನಾನು ಕೊಟ್ಟಿರುವ ಪ್ರಶ್ನೆ ಪತ್ರಿಕೆಯಲ್ಲಿ ೫೫ ಅಂಕಗಳದ್ದು ೩೦ ಪ್ರಶ್ನೆಗಳು ಬಂದಿವೆ. ಆದರೆ ಮಾನ್ಯ ಸಚಿವರು ಒಂದೇ ಒಂದು